ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಕೃಷಿ ಹವಾಮಾನ ವಿಭಾಗ, ಜಿ.ಕೆ.ವಿ.ಕೆ, ಬೆಂಗಳೂರು–65

ಪಟ್ರೇನಹಳ್ಳಿಯ ಕೃಷಿ ಹವಾಮಾನ ಮುನ್ಸೂಚನೆ

ದಿನಾಂಕ:6.05.16

ಈ ವಾರದ ಮುನ್ಸೂಚನೆ (7.5.16 to 11.5.16 ವರೆಗೆ)

ನಿಯತಾಂಕಗಳು	7.05.16	8.05.16	9.05.16	10.05.16	11.05.16
ಮಳೆ (ಮಿ ಮಿ)	0	2	2	0	0
ಗರಿಷ್ಠ ಉಷ್ಣಾಂಶ(ಡಿ.ಸೆ.)	34	34	35	37	35
ಕನಿಷ್ಠ ಉಷ್ಣಾಂಶ (ಡಿ.ಸೆ.)	23	23	25	25	25
ಮೋಡ (ಪ್ರಮಾಣ)	4	4	4	4	3
ಅರ್ದ್ರತೆ ೭.೨೦ ಬೆ (ಶೇ)	92	92	63	65	62
ಅರ್ದ್ರತೆ ೨.೨೦ ಮ (ಶೇ)	28	32	31	27	25
ಗಾಳಿಯ ವೇಗ (ಕಿ.ಮಿ/ಗಂಟೆಗೆ)	13	11	9	8	10
ಗಾಳಿಯ ದಿಕ್ಕು (ಡಿಗ್ರಿ)	220	209	186	51	234

ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆಯ ಪ್ರಕಾರ ಪಟ್ರೇನಹಳ್ಳಿ ಹಾಗೂ ಸುತ್ತಮುತ್ತ ಮುಂದಿನ ದಿನಗಳಲ್ಲಿ ಮೋಡ ಕವಿದ ವಾತವರಣವಿದ್ದು ತುಂತುರು ಮಳೆಯಾಗುವ ಸಾಧ್ಯತೆಯಿದೆ. ದಿನದ ಗರಿಷ್ಠ ಉಷ್ಣಾಂಶವು 34–37°C ಮತ್ತು ಕನಿಷ್ಠ 23-25°C ಇರಲಿದೆ. ಬೆಳಗಿನ ಆರ್ದ್ರತೆ ಪ್ರಮಾಣ ಶೇ 62-93 % ಇದ್ದು, ಮಧ್ಯಾಹ್ನ 25-32 % ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ 9-13 ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

- ✓ **ಪೂರ್ವ ಮುಂಗಾರಿಗೆ ಈ ಕೆಳಗಿನ ತಳಿಗಳನ್ನು ಬಿತ್ತನೆ ಮಾಡಲು ಸೂಚಿಸಲಾಗಿದೆ.**

  ರಾಗಿ: ಇಂಡಾಫ್–9, ಎಳ್ಳು : ನವಿಲೆ–1, ಟಿ–7, ಅಲಸಂದೆ : ಟಿ.ವಿ.ಎಕ್ಸ್–944, ಕೆ.ಬಿ.ಸಿ–1

  ಹೆಸರು :ಪಿ.ಎಸ್–16, ಪಿ.ಡಿ.ಎಮ್–84, 178 , ಉದ್ದು: ಕರಗಾವ್–3, ಟಿ–9, ರಶ್ಮಿ
- ✓ ನೀರು ಬರಿದಾಗಿರುವ ಕೆರೆಗಳಲ್ಲಿ ಕೆರೆಗೋಡು ಮಣ್ಣನ್ನು ತೆಗೆದು ಭೂಮಿಗೆ ಸೇರಿಸುವುದರಿಂದ ಭೂಮಿಯ ಫಲವತ್ತತೆಯನ್ನು ಹೆಚ್ಚಿಸಬಹುದು
- ✓ ಮೇ ತಿಂಗಳುಗಳಲ್ಲಿ ಮೊದಲನೆ ಬೆಳೆಯಾಗಿ ಅಲಸಂದೆ, ಎಳ್ಳು, ಉದ್ದು, ಹೆಸರು ಮೇ ತಿಂಗಳಿನಲ್ಲಿ ಬಿತ್ತ ಬಹುದಾದ ಇವುಗಳ ಬೇಸಾಯಕ್ಕೆ ಪರಿಕರಗಳ ಪೂರಕಗಳನ್ನು ಸಿದ್ಧತೆ ಮಾಡಿಕೊಳ್ಳಿ.
- ✓ ಮಾವು: ತೇವಾಂಶದ ರಕ್ಷಣೆಗೆ ಬೆಳೆಗಳ ಉಳಿಕೆ ಮತ್ತು ಕಳೆಗಳನ್ನು ಕತ್ತರಿಸಿ ಹೊದಿಕೆ ಮಾಡುವುದು.
- ✓ ಮಾವಿನ ಮರದ ಕೆಳಗೆ ಬೆಳೆದಿರುವ ಕಳೆಗಿಡಗಳನ್ನು ಕಡಿದುಹಾಕಿ ಸ್ವಚ್ಚಗೊಳಿಸಬೇಕು.

ಸಸ್ಯ ಸಂರಕ್ಷಣೆ:

- ✓ **ರಸ ಹೀರುವ ಕೀಟಗಳು:** ಇವುಗಳ ಹತೋಟಿಗೆ ಶೇ. ಅರಷ್ಟು ಬೇವಿನ ಕಷಾಯವನ್ನು ಸಿಂಪಡಿಸಬೇಕು ಅಥವಾ ಬೇವಿನ ಎಣ್ಣೆಯನ್ನು ಸಿಂಪಡಿಸಬೇಕು ಅಥವಾ ಇಮಿಡಕ್ಲೋಪ್ರಿಡ್ (0.5 ml/L) ಸಿಂಪಡಿಸಿ.
- ✓ ಮಾವಿನ ಬೆಳೆಯಲ್ಲಿ ಕಾಯಿಕೊರಕ ಕಂಡುಬಂದಲ್ಲಿ ಕಾರ್ಬರಿಲ್ (೪ ಗ್ರಾಂ ಪ್ರತಿ ಲೀಗೆ) ಸಿಂಪಡಿಸಿ, ಚಿಬ್ಬುರೋಗಕ್ಕೆ ಕಾರ್ಬಂಡೈಜಿಮ್ (೧ ಗ್ರಾಂ ಪ್ರತಿ ಲೀಗೆ)

ನೋಡಲ್ ಅಧಿಕಾರಿ:

ಕೃಷಿ ಹವಾಮಾನ ವಿಭಾಗ

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು